# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 14

**ಮಾನ್ಯ ಸದಸ್ಯರ ಹೆಸರು** : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 12-09-2022

**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವರು

<table>
<tr><th>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಲ್ಲೂರು ಮತ್ತು ಕೊಡಚಾದ್ರಿ ರೋಪ್-ವೇ ನಿರ್ಮಾಣ ಕಾಮಗಾರಿಯ ಡಿ.ಪಿ.ಆರ್. ತಯಾರಿಸಲಾಗಿದೆಯೇ' ಸದರಿ ಕಾಮಗಾರಿಗೆ ಈವರೆಗೆ ಖರ್ಚು ಮಾಡಿದ ಮೊತ್ತವೆಷ್ಟು; (ಡಿ.ಪಿ.ಆರ್. ಪ್ರತಿಯೊಂದಿಗೆ ವಿವರ ನೀಡುವುದು)</td><td>ಕೊಡಚಾದ್ರಿ ಬೆಟ್ಟದಲ್ಲಿ ರೋಪ್-ವೇ ಅಳವಡಿಸುವ ಯೋಜನೆಗೆ ಮೆ: ಐಡೆಕ್ (iDeCK) ಸಂಸ್ಥೆಯಿಂದ ಈ ಕೆಳಗೆ ನಮೂದಿಸಿರುವಂತೆ Transaction Advisory ಮತ್ತು PMC ಸೇವೆಯನ್ನು ನೇರವಾಗಿ ಪಡೆಯಲು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ/141//ವೆಚ್ಚ-12/2021, ದಿನಾಂಕ: 30/04/2021 ರಲ್ಲಿ 4(ಜಿ) ವಿನಾಯಿತಿ ನೀಡಿರುತ್ತದೆ.<br><br><table><tr><th>ಯೋಜನೆಯ ಹೆಸರು</th><th>Transaction Advisory Fee (in Lakhs excluding GST)</th><th>PMC Fee ( in % of project cost without GST)</th></tr><tr><td>ಕೊಡಚಾದ್ರಿ ಬೆಟ್ಟ</td><td>80.00</td><td>2.80%</td></tr></table><br>ಅದರಂತೆ, ಕೊಡಚಾದ್ರಿ ಬೆಟ್ಟದಲ್ಲಿ ರೋಪ್-ವೇ ಅಳವಡಿಸುವ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ:09/11/2021 ರಂದು ಮೆ: ಐಡೆಕ್ (iDeCK) ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿ ಕೊಳ್ಳಲಾಗಿರುತ್ತದೆ.<br><br>ಸದರಿ ರೋಪ್-ವೇ ಯೋಜನೆಗೆ ಇಲಾಖೆಯ ವಹಿವಾಟು ಸಲಹೆಗಾರರಾದ, ಮೆ: ಐಡೆಕ್ (iDeCK) ಸಂಸ್ಥೆಯವರಿಂದ ಕರಡು ಯೋಜನಾ ಕಾರ್ಯಸಾಧ್ಯತಾ ವರದಿ ಸಲ್ಲಿಕೆ ಹಂತದಲ್ಲಿರುತ್ತದೆ.<br><br>ಈ ಪ್ರದೇಶವು ಪಶ್ಚಿಮ ಘಟ್ಟಗಳ ಪರಿಸರ-ಸೂಕ್ಷ್ಮ ವಲಯದಲ್ಲಿನ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿರುವುದರಿಂದ, PCCF, Wildlife, CCF, Mangaluru, DFO, Karkala ಮತ್ತು ಇತರೆ ಸಂಬಂಧಪಟ್ಟ ಅಧಿಕಾರಿಗಳನ್ನೊಳಗೊಂಡ ಹಾಗೂ ಅರಣ್ಯ ಇಲಾಖೆಯ ಕ್ಷೇತ್ರಮಟ್ಟದ ಅಧಿಕಾರಿಗಳೊಂದಿಗೆ ವಿವರವಾದ ಕಾರ್ಯ ಸಾಧ್ಯತಾ ವರದಿಯನ್ನು ತಯಾರಿಸುವ ಕುರಿತು ಸಭೆ ನಡೆಸಿದ ನಂತರ ಅಂತಿಮ ಯೋಜನಾ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಕ್ರಮವಹಿಸಬೇಕಿದೆ.<br><br>ಸದರಿ ರೋಪ್-ವೇ ಯೋಜನೆಗೆ ಇಲಾಖೆಯಿಂದ ಇದುವರೆಗೆ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.</td></tr>
</table>

| | | |
|---|---|---|
| ಆ) | ಕೊಲ್ಲೂರು ಕಟ್ಟಿನ ಹೊಳೆಯಿಂದ ಕೊಡಚಾದ್ರಿ ತುದಿಯವರೆಗೆ ಕೈಗೊಳ್ಳಲಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ (ರಸ್ತೆ, ಲ್ಯಾಂಡ್ ಸ್ಕೇಪಿಂಗ್, ಒಳಾಂಗಣ ಆಟ, ಡಾರ್ಮಿಟರಿ ಕೊಠಡಿಗಳು ಪಾರ್ಕಿಂಗ್ ಸೌಲಭ್ಯ ಮತ್ತು ಇತರ ಕಾಮಗಾರಿಗಳು) ಈವರೆಗೆ ಖರ್ಚು ಮಾಡಿದ ಮೊತ್ತವೆಷ್ಟು; (ಕಾಮಗಾರಿವಾರು ವಿವರ ನೀಡುವುದು) | ಪ್ರವಾಸೋದ್ಯಮ ಇಲಾಖೆಯಿಂದ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ಕಟ್ಟಿನಹೊಳೆಯಿಂದ ಕೊಡಚಾದ್ರಿ ಬೆಟ್ಟದ ತುದಿಯವರೆಗೆ ಹಾಗೂ ಸಂಪೆಕಟ್ಟೆಯಿಂದ ಕಟ್ಟಿನಹೊಳೆವರೆಗಿನ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು KRDCL ಮತ್ತು KSTDC ಅವರ ಮೂಲಕ ಅನುಷ್ಠಾನಗೊಳಿಸಲಾಗಿರುವ ಕಾಮಗಾರಿಗಳ ಹಾಗೂ ಅನುದಾನದ ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಿದೆ. |
| ಇ) | ಈ ಭಾಗದಲ್ಲಿ ಪ್ರವಾಸೋದ್ಯಮ ದೃಷ್ಟಿಯಿಂದ ಕೈಗೊಳ್ಳಬೇಕಾಗಿರುವ ಇನ್ನುಳಿದ ಕಾಮಗಾರಿ ಗಳನ್ನು ಯಾವಾಗ ಪ್ರಾರಂಭಿಸಲಾಗುವುದು? (ಕಾರ್ಯ ಯೋಜನೆಯೊಂದಿಗೆ ವಿವರ ನೀಡುವುದು) | ಕಟ್ಟಿನಹೊಳೆಯಿಂದ ಕೊಡಚಾದ್ರಿ ಬೆಟ್ಟದ ತುದಿಯವರೆಗಿನ ಇನ್ನುಳಿದ ರಸ್ತೆ ಕಾಮಗಾರಿಯನ್ನು ಅರಣ್ಯ ಇಲಾಖೆಯ ಅನುಮತಿ ದೊರೆತ ನಂತರ, ನಿಯಮಾನುಸಾರ ಪರಿಶೀಲಿಸಿ ಹಾಗೂ ಇಲಾಖೆಗೆ ಒದಗಿಸುವ ಅನುದಾನದ ಲಭ್ಯತೆಯನ್ನು ಆಧರಿಸಿ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. |

**TOR 243 TDV 2022**

**(ಆನಂದ್ ಸಿಂಗ್)**
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಹಾಗೂ ಪರಿಸರ ಸಚಿವರು

**ವಿ.ಸ. ಪ್ರಶ್ನೆ ಸಂಖ್ಯೆ: 14 ಕ್ಕೆ ಅನುಬಂಧ-1**

**ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ಕಟ್ಟಿನ ಹೊಳೆಯಿಂದ ಕೊಡಚಾದ್ರಿ ಬೆಟ್ಟದ ತುದಿಯವರೆಗೆ ಹಾಗೂ ಸಂಪೆಕಟ್ಟೆಯಿಂದ ಕಟ್ಟಿನಹೊಳೆ ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳ ವಿವರ.**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಖರ್ಚು ಮಾಡಿರುವ ಮೊತ್ತ | ಅನುಷ್ಠಾನ ಸಂಸ್ಥೆ | ಕಾಮಗಾರಿಯ ಹಂತ |
|---|---|---|---|---|
| 1 | ಸಂಪೆಕಟ್ಟೆಯಿಂದ ಕಟ್ಟಿನಹೊಳೆ ವರೆಗಿನ 6.50 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿ. | 746.76 | KRDCL | ಕಾಮಗಾರಿ ಪೂರ್ಣಗೊಂಡಿದೆ |
| 2 | ಸಂಪೆಕಟ್ಟೆಯಿಂದ ಕಟ್ಟಿನಹೊಳೆಗೆ ಹೋಗುವ 6.50 ಕಿ.ಮೀ ಉದ್ದದ ರಸ್ತೆಯ ಮಧ್ಯೆ ಚಕ್ರ ಡ್ಯಾಂ ಹಿಂಭಾಗದಲ್ಲಿ Water Conducting System ಬಳಿ ಸೇತುವೆ ನಿರ್ಮಾಣ ಕಾಮಗಾರಿ. | 305.56 | KRDCL | ಕಾಮಗಾರಿ ಪೂರ್ಣಗೊಂಡಿದೆ |
| 3 | ಕಟ್ಟಿನ ಹೊಳೆಯಿಂದ ಕೊಡಚಾದ್ರಿ ಬೆಟ್ಟದ ತುದಿಯವರೆಗೆ 8.17 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಗೆ | 22.07 | KRDCL | ಈ ರಸ್ತೆಯು ಅರಣ್ಯ ಪ್ರದೇಶ ಹಾಗೂ ವನ್ಯಜೀವಿ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಅರಣ್ಯ ಇಲಾಖೆಯು ಕಾಮಗಾರಿಯನ್ನು ಆಕ್ಷೇಪಣೆ ವ್ಯಕ್ತಪಡಿಸಿರುವುದರಿಂದ, ಕಾಮಗಾರಿ ಸ್ಥಗಿತಗೊಂಡಿರುತ್ತದೆ.<br><br>KRDCL ಅವರು ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಅನುಮತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿಸಲ್ಲಿsi, ಸದರಿ ಅರ್ಜಿಯನ್ನು ದಿನಾಂಕ: 08/09/2020 ರಂದು ಅಂಗೀಕರಿಸಿಸಲಾಗಿದ್ದು,. ಸದರಿ ಪ್ರಸ್ತಾಪಿತ ರಸ್ತೆಯಲ್ಲಿ ಕಟ್ಟಿನಹೊಳೆಯಿಂದ ಅರಣ್ಯ ಚೆಕ್ ಪೋಸ್ಟ್ ವರೆಗಿನ ಸೂಮಾರು 1.50 ಕಿ.ಮೀ ಉದ್ದದ ರಸ್ತೆ ಅರಣ್ಯ ಪ್ರದೇಶದಲ್ಲಿ ಹಾದು ಹೋಗಿದ್ದು, ಸದರಿ ರಸ್ತೆಯು 1980ರ ಅರಣ್ಯ ಕಾಯ್ದೆ ಬರುವುದಕ್ಕೂ ಪೂರ್ವದಿಂದಲೇ ಇರುವುದು ದಾಖಲೆಗಳಲ್ಲಿ ಇರುವುದು ತಿಳಿದುಬಂದಿರುತ್ತದೆ. ಆದ್ದರಿಂದ 1980ರ ಅರಣ್ಯ ಕಾಯ್ದೆ ಪ್ರಕಾರ 25ನೇ ಅಕ್ಟೋಬರ್ 1980ರ ಪೂರ್ವದಿಂದ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಕಚ್ಚಾ ಅಥವಾ ಪಕ್ಕಾ ರಸ್ತೆಗಳಿದ್ದಲ್ಲಿ, ಅರಣ್ಯ ಕಾಯ್ದೆ 1980 (FC ACT-1980) ರ ಅನುಮತಿ ಪಡೆಯದೆ ರಾಜ್ಯ ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸಬಹುದೆಂದು ತಿಳಿಸಿರುತ್ತಾರೆ.<br><br>ಅದರಂತೆ, KRDCL ರವರಿಂದ ರಾಜ್ಯ ಅರಣ್ಯ ಇಲಾಖೆಯ ಅನುಮತಿ ಪಡೆಯಲು ಪತ್ರ ಬರೆದಿರುತ್ತಾರೆ. ಅರಣ್ಯ ಇಲಾಖೆಯ ಅನುಮತಿ ದೊರೆತ ನಂತರ, ನಿಯಮಾನುಸಾರ ಪರಿಶೀಲಿಸಿ ಹಾಗೂ ಇಲಾಖೆಗೆ ಒದಗಿಸುವ ಅನುದಾನದ ಲಭ್ಯತೆಯನ್ನು ಆಧಾರಿಸಿ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ. |
| 4 | ಶಿವಮೊಗ್ಗ ಜಿಲ್ಲೆಯ ಕೊಡಚಾದ್ರಿ ಬೆಟ್ಟ ಪ್ರದೇಶದ ತಪ್ಪಲಿನಲ್ಲಿ ನಾಗೋಡಿ ಗ್ರಾಮದ ಗೌರಿಕೆರೆ ಪ್ರದೇಶದಲ್ಲಿ ಪ್ರವಸಿ ಸಂಕೀರ್ಣ ಕಾಮಗಾರಿ. | 390.36 | KSTDC | ಕಾಮಗಾರಿ ಪೂರ್ಣಗೊಳಿಸಲಾಗಿದೆ. |
| **ಒಟ್ಟು** | | **1464.75** | | |